## ಕರ್ನಾಟಕ ಸರ್ಕಾರದ ನಡಾವಳಿ

ವಿಷಯ: ಅಂತರ ಇಲಾಖೆಯ ಭೂ ವಿವಾದ ನಿವಾರಣಾ ಕೋಶ (Inter Departmental Land Dispute Resolution Cell) ರಚನೆಯ ಕುರಿತು.

ಉಲ್ಲೇಖ:
1. ರಿಟ್ ಅರ್ಜಿ ಸಂಖ್ಯೆ: 392/2021 ನ್ಯಾ/ಸಾ (c/w) ರಿಟ್ ಅರ್ಜಿ ಸಂಖ್ಯೆ: 19674/2024 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 18.08.2025 ರ ಆದೇಶ.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಕಾ/11311769/2025, ದಿನಾಂಕ: 21.11.2025
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಡತ ಸಂಖ್ಯೆ: KFD/WP/RFO(MISC)/57/2025-WP (ದಿನಾಂಕ: 26.11.2025)

**ಪ್ರಸ್ತಾವನೆ:**

ಮಾನ್ಯ ಉಚ್ಚ ನ್ಯಾಯಾಲಯವು WP No.392/2021 c/w WP No. 19674/2024ರ ಪಕರಣದಲ್ಲಿ ದಿನಾಂಕ: 18.08.2025ರಂದು ನೀಡಿರುವ ಆದೇಶದ ಪ್ಯಾರಾ 34ರಲ್ಲಿ, ಅರಣ್ಯ ಮತ್ತು ಭೂ ದಾಖಲಾತಿಗಳ ಗೊಂದಲ ಬಗೆಹರಿಸಲು ಸರ್ಕಾರವು ಹಂತ ಹಂತವಾಗಿ ಗಡಿಗಳ ಡಿಜಿಟಲ್ ನಕ್ಷೆ, ಕಡ್ಡಾಯ ಭೌಗೋಳಿಕ ಪರಿಶೀಲನೆ ಮತ್ತು ಗ್ರೀನ್ ವಾಚ್ ಪ್ಲಾಟ್‌ಫಾರಂ ಇತ್ಯಾದಿಗಳ ಕ್ರಮಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಗಿರುತ್ತದೆ. ಮೊದಲನೇ ಹಂತದಲ್ಲಿ ಈ ಕೆಳಕಂಡ ಸಮಿತಿಗಳನ್ನು ರಚಿಸಲು ನಿರ್ದೇಶನ ನೀಡಿರುತ್ತದೆ.

*"34.15. **Establishment of an Inter-Departmental Land Dispute Resolution Cell (IDLDRC):** A dedicated, high-level cell, comprising representatives from the Revenue Department, the Forest Department, and Urban Planning Authorities, shall be established under the direct supervision of the Chief Secretary. This cell shall be the sole body authorised to mediate and issue binding, inter-departmental rectification orders for conflicting records. The Regional Commissioners shall head this cell, as they are tasked with coordinating the work of all departments at the regional level to resolve inter-departmental problems."*

ಮಾನ್ಯ ಉಚ್ಚನ್ಯಾಯಾಲಯದ ಆದೇಶದಲ್ಲಿ ಪ್ರಸ್ತಾಪಿಸಿರುವಂತೆ, ಭೂ ಸ್ವಾಮ್ಯತೆ, ಭೂ ಹಸ್ತಾಂತರ, ಗಡಿ ತಿದ್ದುಪಡಿ, ದಾಖಲೆಗಳಲ್ಲಿನ ವೈರುಧ್ಯತೆಗಳು, ಸಾರ್ವಜನಿಕ ಉದ್ದೇಶಗಳಿಗಾಗಿ ಭೂ-ಬಳಕೆ ಮುಂತಾದ ವಿಷಯಗಳಲ್ಲಿ ಪರಸ್ಪರ ಇಲಾಖೆಗಳ ಮಟ್ಟದಲ್ಲಿ ಉಂಟಾಗುತ್ತಿರುವ ವಿವಾದಗಳನ್ನು ತ್ವರಿತ, ಪಾರದರ್ಶಕ ಮತ್ತು ಸಮನ್ವಯಾತ್ಮಕ ರೀತಿಯಲ್ಲಿ ನಿವಾರಿಸಲು ಮಾನ್ಯ ನ್ಯಾಯಾಲಯದ ಪ್ರಮುಖ ಉದ್ದೇಶವಾಗಿರುತ್ತದೆ. ಭೂಮಿಯ ವಿಷಯವನ್ನು ನಿರ್ವಹಿಸುವ ಪ್ರಮುಖ ಇಲಾಖೆಗಳಲ್ಲಿನ ಪ್ರತಿನಿಧಿಗಳನ್ನೊಳಗೊಂಡ **ಅಂತರ-ಇಲಾಖೆಯ ಭೂ-ವಿವಾದ ನಿವಾರಣಾ ಕೋಶವನ್ನು (Inter Departmental Land Dispute Resolution Cell)** ಸರ್ಕಾರದ ಮುಖ್ಯ ಕಾರ್ಯದರ್ಶಿರವರ ನೇರ ಮೇಲ್ವಿಚಾರಣೆಯಲ್ಲಿ ರಚಿಸುವ ಅವಶ್ಯಕತೆ ಇರುತ್ತದೆ.

ಅಲ್ಲದೇ, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಮೇಲ್ಕಾಣಿಸಿದ ಆದೇಶದಲ್ಲಿನ ಕಂಡಿಕೆ 34.26 ರಲ್ಲಿ ಈ ಕೆಳಗಿನಂತೆ ನಿರ್ದೇಶನ ನೀಡಿರುತ್ತದೆ.

*34.26. Phase I (Immediate – 3 months): The IDLDRC and HLC are to be established. Mandatory data sharing protocols for all new land transactions must be put into place, ensuring no new contradictory records are created. These protocols would function like "data contracts", ensuring a common understanding and quality of data exchanged between departments. Blockchain methodology could also be considered to be used. ...*

ಈ ನಿಟ್ಟಿನಲ್ಲಿ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ: 22.12.2025 ಸಭೆಯಲ್ಲಿ ಅಂತರ ಇಲಾಖೆಯ ಭೂ ವಿವಾದ ನಿವಾರಣಾ ಕೋಶವನ್ನು (IDLDRC) ಸಮಿತಿಯನ್ನು ತುರ್ತಾಗಿ ರಚಿಸಲು ನಿರ್ಧರಿಸಲಾಗಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: FEE/113/FAF/2025,**
**ಬೆಂಗಳೂರು, ದಿನಾಂಕ: 26 .12.2025**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಭೂನಿರ್ವಹಣೆಗೆ ಸಂಬಂಧಿಸಿದ ಸರ್ಕಾರಿ ಇಲಾಖೆಗಳ ನಡುವೆ ಉದ್ಭವಿಸುವ ಭೂ ವಿವಾದಗಳನ್ನು ಪರಿಶೀಲಿಸಿ ಹಾಗೂ ಪರಿಹರಿಸಲು ಅನುವಾಗುವಂತೆ ಅಂತರ-ಇಲಾಖೆಯ ಭೂ-ವಿವಾದ ನಿವಾರಣಾ ಕೋಶದ (**Inter Departmental Land Dispute Resolution Cell (IDLDRC)**) ಕೋಶವು ಈ ಕೆಳಗಿನಂತೆ ರಚಿಸಲಾಗಿದೆ.

1. ಪ್ರಾದೇಶಿಕ ಆಯುಕ್ತರುಗಳು, ಕಂದಾಯ ಇಲಾಖೆ – **ಅಧ್ಯಕ್ಷರು**
2. ಸಂಬಂಧಪಟ್ಟ ವಿಭಾಗದ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ **ಸದಸ್ಯರು**
3. ಸಂಬಂಧಪಟ್ಟ ವಿಭಾಗದ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು – **ಸದಸ್ಯರು**
4. ಸಂಬಂಧಪಟ್ಟ ವಿಭಾಗದ ಜಿಲ್ಲೆಗಳ ಪೊಲೀಸ್ ಅಧೀಕ್ಷಕರು ಒಳಾಡಳಿತ ಇಲಾಖೆ **ಸದಸ್ಯರು.**
5. ಅಪರ ಪ್ರಾದೇಶಿಕ ಆಯುಕ್ತಕರು, ಬೆಂಗಳೂರು/ಮೈಸೂರು/ಬೆಳಗಾವಿ/ಕಲ್ಬುರ್ಗಿ **ಸದಸ್ಯ ಕಾರ್ಯದರ್ಶಿ.**
6. ಸಂಬಂಧಪಟ್ಟ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, (ಪ್ರಾದೇಶಿಕ/ವನ್ಯಜೀವಿ), ಅರಣ್ಯ ಇಲಾಖೆ - **ಸದಸ್ಯರು**
7. ಸಂಬಂಧಪಟ್ಟ ವಿಭಾಗದ ಮಹಾನಗರ ಪಾಲಿಕೆಗಳು ಆಯುಕ್ತರು - **ಸದಸ್ಯರು**
8. ಆಯುಕ್ತರು, ಉತ್ತರ/ದಕ್ಷಿಣ/ಪೂರ್ವ/ಪಶ್ಚಿಮ/ಕೇಂದ್ರ ಗ್ರೇಟರ್ ಬೆಂಗಳೂರು ಪ್ರಾಧಿಕಾರ- **ಸದಸ್ಯರು.**
9. ಸಂಬಂಧಪಟ್ಟ ವಿಭಾಗದ ಭೂ-ದಾಖಲೆಗಳ ಉಪ ನಿರ್ದೇಶಕರುಗಳು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, – **ಸದಸ್ಯರು**
10. ಸಂಬಂಧಪಟ್ಟ ವಿಭಾಗದ ಪೌರಾಯುಕ್ತರು ನಗರಸಭೆ – **ಸದಸ್ಯರು.**

11. ಸಂಬಂಧಪಟ್ಟ ವಿಭಾಗದ ಮುಖ್ಯಾಧಿಕಾರಿ, ಪುರಸಭೆ – **ಸದಸ್ಯರು.**
12. ಸಂಬಂಧಪಟ್ಟ ವಿಭಾಗದ ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ – **ಸದಸ್ಯರು.**

ಈ ಸಮಿತಿಯ ಕರ್ತವ್ಯ ಹಾಗೂ ಕಾರ್ಯವಿಧಾನವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

**ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಬಿ. ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,
(ಅರಣ್ಯ ಸಿ ಮತ್ತು ಸಮನ್ವಯ)

**ಪ್ರತಿಗಳು:**
1. ಮಾನ್ಯ ಅಡ್ವೋಕೇಟ್ ಜನರಲ್, ಉಚ್ಚ ನ್ಯಾಯಾಲಯ ಕಟ್ಟಡ ಬೆಂಗಳೂರು-01
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕೊಠಡಿ ಸಂಖ್ಯೆ: 320, 3ನೇ ಮಹಡಿ ವಿಧಾನ ಸೌಧ, ಬೆಂಗಳೂರು-560001
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಪಡೆ ಮುಖ್ಯಸ್ಥರು) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-03
5. ಎಲ್ಲಾ ಪ್ರಾದೇಶಿಕ ಆಯುಕ್ತಕರು. ಬೆಂಗಳೂರು/ಮೈಸೂರು/ಬೆಳಗಾವಿ/ಕಲ್ಬುರ್ಗಿ
6. ಎಲ್ಲಾ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ ಇವರ ಮುಖಾಂತರ.
7. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಇವರ ಮುಖಾಂತರ.
8. ಎಲ್ಲಾ ಜಿಲ್ಲಾ ಪೋಲಿಸ್ ಅಧೀಕ್ಷಕರು ಒಳಾಡಳಿತ ಇಲಾಖೆ ಇವರ ಮುಖಾಂತರ.
9. ಎಲ್ಲಾ ಅಪರ ಆಯುಕ್ತಕರು, ಬೆಂಗಳೂರು/ಮೈಸೂರು/ಬೆಳಗಾವಿ/ಕಲ್ಬುರ್ಗಿ ಕಂದಾಯ ಇಲಾಖೆ ಇವರ ಮುಖಾಂತರ.
10. ಎಲ್ಲಾ ಭೂ-ದಾಖಲೆಗಳ ಉಪ ನಿರ್ದೇಶಕರುಗಳು, ಆಯುಕ್ತಕರು ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಇವರ ಮುಖಾಂತರ.
11. ಎಲ್ಲಾ ನಗರಸಭೆಗಳ ಪೌರಾಯುಕ್ತರು, ಮುಖ್ಯಾಧಿಕಾರಿಗಳು -ಎಲ್ಲಾ ಪುರಸಭೆ/ಪಟ್ಟಣ ಪಂಚಾಯಿತಿ ಪೌರಾಡಳಿತ ನಿರ್ದೇಶನಾಲಯದ ಮುಖಾಂತರ
12. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ ವನ್ಯಜೀವಿ) ಪ್ರಾಧನ ಮುಖ್ಯ ಅರಣ್ಯಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಮುಖಾಂತರ.
13. ಆಯುಕ್ತಕರು, ಎಲ್ಲಾ ಮಹಾನಗರ ಪಾಲಿಕೆಗಳು ನಗರಾಭಿವೃದ್ಧಿ ಇಲಾಖೆ ಇವರ ಮುಖಾಂತರ.
14. ಆಯುಕ್ತರು, ಉತ್ತರ/ದಕ್ಷಿಣ/ಪೂರ್ವ/ಪಶ್ಚಿಮ/ಕೇಂದ್ರ ಗ್ರೇಟರ್ ಬೆಂಗಳೂರು ಪ್ರಾಧಿಕಾರ ನಗರಾಭಿವೃದ್ಧಿ ಇಲಾಖೆ ಇವರ ಮುಖಾಂತರ.
15. ಶಾಖೆಯ ರಕ್ಷ ಕಡತ.